# <u>ಬಾಲಿ ಸಚಿವರ ಸಮಾವೇಶ– ಭಾರತ ಗಳಿಸಿದ್ದೇನು?</u>

ಅರುಣ್‌ಜೇಟ್ಲಿ
ರಾಜ್ಯ ಸಭಾ ವಿರೋಧ ಪಕ್ಷದ ನಾಯಕರು

ಭಾರತದ ಸಹಸ್ರಾರು ಬಡಜನರ ಮೇಲೆ ಪ್ರಭಾವ ಬೀರುವಆಹಾರ ಭದ್ರತೆಯ ಪ್ರಮುಖ ವಿಚಾರದಲ್ಲಿ ಮಧ್ಯಂತರಕ್ರಮ ಕೈಗೊಳ್ಳಲು ಬಾಲಿಯಲ್ಲಿ ನಡೆದ ಸಚಿವರ ಸಮಾವೇಶಒಪ್ಪಿಗೆ ಸೂಚಿಸಿದೆ. ಈ ಮಧ್ಯಂತರಕ್ರಮ ನಾಲ್ಕು ವರ್ಷಗಳವರೆಗೂ ಅಸ್ತಿತ್ವದಲ್ಲಿದ್ದು, ಆ ವೇಳೆಗೆ ಖಾಯಂಕ್ರಮ ಕೈಗೊಳ್ಳುವಂತೆ ಸಮಾಲೋಚನೆ ಮುಂದುವರೆಸುವ ನಿರ್ಣಯ ತೆಗೆದುಕೊಳ್ಳಲಾಗಿದೆ.ಈ ಮೂಲಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ವ್ಯಾಪಾರ ಸೌಲಭ್ಯಒಪ್ಪಂದ ಮಾಡಕೊಳ್ಳಲು ನಡೆಸಿದ ಸತತಪ್ರಯತ್ನಕ್ಕೆ ಪೂರಕವಾಗಿ ಪ್ರಸ್ತಾಪಿಸಿದ 'ಶಾಂತಿ ಪರಿಚ್ಛೇದದ' ಗಾಳಕ್ಕೆ ಭಾರತ ಸಿಲುಕಿದೆ.

ಭಾರತೀಯ ಸಮಾಲೋಚಕರು ಬಾಲಿ ಸಭೆಗೆ ತೆರಳುವ ಮುನ್ನವೇ, ಆಹಾರ ಭದ್ರತೆಕಾರ್ಯಕ್ರಮ ಸಮಾಲೋಚನೆಗೆ ಒಳಪಡದ ವಿಚಾರವೆಂದು ಸರ್ಕಾರ ಘೋಷಿಸಿತ್ತು.ಆದರೆ ಸಭೆಯಲ್ಲಿಇದಕ್ಕೆ ವಿರುದ್ಧವಾದ ನಿರ್ಣಯವನ್ನುಅದುತೆಗೆದುಕೊಂಡಿದೆ.ಈ ಒಪ್ಪಂದದ ನಂತರ ನಮ್ಮಆಹಾರ ಭದ್ರತೆಕಾರ್ಯಕ್ರಮಕ್ಕೆಡಬ್ಲ್ಯುಟಿಓ ಸದಸ್ಯ ರಾಷ್ಟ್ರಗಳ ಹಸ್ತಕ್ಷೇಪ ಹೆಚ್ಚುವ ಮೂಲಕ ಅದಕ್ಕೆಅಪಾಯಉಂಟಾಗಿದೆ.ಡಬ್ಲ್ಯುಟಿಓಜಾರಿಗೆತರುವ ನಿಬಂಧನೆಗಳನ್ನು ಚಾಚುತಪ್ಪದೆಅನುಸರಿಸಬೇಕಾಗಿದ್ದು, ನಮ್ಮದೇಶದ ಕಾರ್ಯಕ್ರಮಗಳ ಕುರಿತುಅಂತಾರಾಷ್ಟ್ರೀಯ ಪರಿವೀಕ್ಷಣೆ ಪ್ರಖರವಾಗಲಿದೆ. ಭಾರತದಲ್ಲಿ ಆಹಾರಧಾನ್ಯಗಳ ಶೇಖರಣೆ ಪ್ರಮಾಣ ಸೀಮಿತಗೊಳಿಸಲು ಹಾಗೂ ನಿಗದಿಗೊಳಿಸಲು ವಿದೇಶಿ ಒತ್ತಡ ಹೆಚ್ಚಲಿದೆ.

"ಉಲ್ಲಂಘನೆ ನಿಯಂತ್ರಣ/ರಕ್ಷಣೆ" ಶೀರ್ಷಿಕೆಯಡಿ ಒಪ್ಪಂದದ ಪರಿಚ್ಛೇದ 4ರ ಅನ್ವಯ "ಕಾರ್ಯಕ್ರಮ ಅನುಷ್ಠಾನ ಮಾಡುವ ಅಭಿವೃದ್ಧಿಶೀಲ ರಾಷ್ಟ್ರಗಳು ಪರಿವಿಡಿ 2ರ ಅನ್ವಯಕಾರ್ಯಕ್ರಮಕ್ಕೆ ಹೊಂದಿಸಲು ಶೇಖರಿಸುವಆಹಾರ ದಾಸ್ತಾನುಗಳು ವ್ಯಾಪಾರಕ್ಕೆ ಹಿಂಜರಿಕೆಉಂಟುಮಾಡಬಾರದು ಹಾಗೂ ಅನ್ಯ ಸದಸ್ಯರಆಹಾರ ಭದ್ರತೆಗೆಚ್ಯುತಿವುಂಟುಮಾಡಬಾರದು" ಎಂಬುದಾಗಿ ತಿಳಿಸಿದೆ. ಈ ನಿಬಂಧನೆಕುಚೋದ್ಯದಿಂದಕೂಡಿದ್ದು, ಭಾರತದ ವಿರುದ್ಧಕಾರ್ಯವಹಿಸಲಿದೆ.ಭಾರತದಆಹಾರ ಭದ್ರತೆಕಾರ್ಯಕ್ರಮಕ್ಕೆ ಹಲವಾರುತೊಡಕುಂಟು ಮಾಡುವ ಸಾಮರ್ಥ್ಯಇದಕ್ಕಿದೆ.ಭಾರತದಲ್ಲಿಯಾರನ್ನು ಬಡವರೆಂದು ಪರಿಗಣಿಸಬಹುದು, ಇಂತಹ ಬಡಜನರಿಗೆ ನೀಡಬೇಕಾದ ಪೌಷ್ಠಿಕ ಆಹಾರಯಾವುದು, ವಿನಾಯತಿಯ ಪ್ರಮಾಣಎಷ್ಟಿರಬೇಕು ಹಾಗೂ ಇಂಥಹ ಹಲವು

ವಿಚಾರಗಳು ಒಪ್ಪಂದದ ವ್ಯಾಪ್ತಿಗೆ ಬರಲಿವೆ. ಈ ಎಲ್ಲಾ ವಿಚಾರಗಳನ್ನೇ ಭಾರತೀಯ ಸಂಸತ್ ದ್ವಿಭಾಗವಾಗಿ ಶಾಸಕಾಂಗ ಚರ್ಚೆ ನಡೆಸಿ ಬೆಂಬಲ ಸೂಚಿಸಿತ್ತು.ಈಗ ಬಾಲಿ ಒಪ್ಪಂದದಅನ್ವಯ ಭಾರತೀಯ ಸಂಸತ್ ಅಂಗೀಕರಿಸಿದ ಆಹಾರ ಭದ್ರತೆ ಶಾಸಕಾಂಗದ ಹಲವಾರು ವಿಚಾರಗಳ ಕುರಿತುಅಂತಾರಾಷ್ಟ್ರೀಯ ಸಮುದಾಯಆಕ್ಷೇಪಎತ್ತುವ ಅವಕಾಶ ಕಲ್ಪಿಸಿದಂತಾಗಿದೆ.ಸಾರ್ವಜನಿಕಆಹಾರದಾಸ್ತಾನುಅವಲಂಬಿತಕಾರ್ಯಕ್ರಮದಕಾರ್ಯ ಚಟುವಟಿಕೆಗಳ ಕುರಿತುಅನ್ಯ ಸದಸ್ಯ ರಾಷ್ಟ್ರಗಳು ವಿವರಕೋರಿದಾಗಲೆಲ್ಲಅವರೊಂದಿಗೆ ಸಮಾಲೋಚನೆ ನಡೆಸುವ ನಿಬಂಧನೆಯನ್ನುಒಪ್ಪಂದದ ಪರಿಚ್ಛೇದ 6 ಭಾರತದ ಮೇಲೆ ಹೇರುತ್ತದೆ.ಇದರ ಫಲಶೃತಿ, ಅಂತಾರಾಷ್ಟ್ರೀಯ ಪರಿಶೀಲನೆಗೆ ಭಾರತ ಬದ್ಧವಾಗಬೇಕಿದೆ.

ತನ್ನಆಹಾರ ಭದ್ರತೆಕಾರ್ಯಕ್ರಮದರೂಪುರೇಶೆಕುರಿತುಯಾವುದೇ ನಿಬಂಧನೆಯನ್ನು ಭಾರತ ಸಹಿಸದುಎಂದುಒಂದೆಡೆ ಹೇಳಲಾಗುತ್ತಿದ್ದರೂ, ನಮ್ಮಆಹಾರ ಭದ್ರತೆಕಾರ್ಯಕ್ರಮದಗಾತ್ರ ಪ್ರಮಾಣಕುರಿತು ಪರಿಶೀಲಿಸುವ, ಪ್ರಶ್ನಿಸುವ ಹಾಗೂ ಒತ್ತಾಯಿಸುವ ಮುಕ್ತ ಅಧಿಕಾರಗಳನ್ನು ಅನ್ಯಡಬ್ಲ್ಯುಟಿಒ ಸದಸ್ಯ ರಾಷ್ಟ್ರಗಳಿಗೆ ನೀಡುವಎಣೆಯಿಲ್ಲದ ಪರಿಚ್ಛೇದಗಳು ಈ ಒಪ್ಪಂದದಲ್ಲಿವೆ. ದೇಶದರೈತರಿಗೆ ಮತ್ತು ಬಡಜನರಿಗೆಯೋಗ್ಯವಾದದ್ದನ್ನು ನಿರ್ಧರಿಸುವಅಧಿಕಾರ ಭಾರತೀಯ ಸಂಸತ್‌ಗೆಇನ್ನುಮುಂದೆಇರುವುದಿಲ್ಲ. ಇನ್ನುಮುಂದೆ ಉಳಿದ ಅನ್ಯ ರಾಷ್ಟ್ರಗಳಿಗೆ ಯೋಗ್ಯವೆನಿಸಿದ್ದನ್ನೇ ನಮ್ಮ ಮೇಲೆ ಹೇರಲಾಗುತ್ತದೆ.

ವಿನಾಯತಿಗಳನ್ನು ಹಾಲಿ ಬೆಲೆಗಳಿಗೆ ಅನುರೂಪವಾಗಿ ಲೆಖ್ಖಿಸಬೇಕು ಎಂಬ ಭಾರತದ ಮನವಿಯನ್ನುಒಪ್ಪಲಾಗಿಲ್ಲ. ಆದಕಾರಣ 1986–88ರ ಅಂಕಿಆಂಶಗಳನ್ನೇ ಮೂಲವಾಗಿ ವಿನಾಯತಿಯನ್ನು ಲೆಖ್ಖಿಸಬೇಕಿದೆ.1986–88ರ ಮೂಲ ಬೆಲೆಗಳು ಹಾಗೂ ಹಾಲಿ ಬೆಲೆಗಳಲ್ಲಿ ಭಾರಿ ವ್ಯತ್ಯಾಸವಿರುವಕಾರಣ ನಮ್ಮ ವಿನಾಯತಿಯ ಪ್ರಮಾಣಗಣನೀಯವಾಗಿ ಕಡಿತಗೊಳ್ಳಲಿದೆ.

ಈ ದೇಶದಜನರಆಹಾರದ ಹಕ್ಕಿಗೆ ಅಪಾಯಒಡ್ಡಿದ ಬದಲಾಗಿ ಭಾರತ ಗಳಿಸಿದ್ದೇನು?ವ್ಯಾಪಾರ ಸೌಲಭ್ಯಒಪ್ಪಂದವಾಗಬೇಕುಎಂಬುದುಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಬೇಡಿಕೆಯಾಗಿತ್ತು.ಅವರ ಉತ್ಪನ್ನಗಳು ಸರಾಗವಾಗಿಗಡಿದಾಟಬೇಕೆಂಬ ಉದ್ದೇಶದಿಂದಲೇಅವರುಉತ್ತಮ ಮೂಲಭೂತಸೌಕರ್ಯಗಳು ಹಾಗೂ ಸುಗಮವಾದ ಸುಂಕದ ಸರಹದ್ದನ್ನು ಬಯಸುತ್ತಿದ್ದಾರೆ.ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಭಾರತದ ಪಾಲು ಕೇವಲ ಶೇಕಡ 1.6ರಷ್ಟಿದೆ.ತನ್ನ ಪಾಲನ್ನುಗೌರವಪೂರ್ಣ ಮಟ್ಟಕ್ಕೆಏರಿಸಲು ನಮ್ಮದೇಶಕ್ಕೆಉತ್ತಮವಾದ ವ್ಯಾಪಾರ ಸೌಲಭ್ಯಗಳ ಆವಶ್ಯಕತೆಯಿದೆ. ಆದರೆ ಶೇಕಡ

೮೦ಕ್ಕೂ ಹೆಚ್ಚು ಬೃಹತ್ ಪಾಲನ್ನು ಹೊಂದಿರುವಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಒಪ್ಪಂದದಆವಶ್ಯಕತೆ ನಮಗಿಂತಲೂ ಹೆಚ್ಚಾಗಿತ್ತು.ಒಪ್ಪಂದದ ಬದಲಾಗಿ ನಮಗೆ ಲಭಿಸಬೇಕಾದ ಪ್ರಮುಖ ಸೌಲಭ್ಯಗಳ ಕುರಿತುಒತ್ತಡ ಹೇರುವ ಹೇರಳ ಅವಕಾಶ ಭಾರತಕ್ಕಿತ್ತು.ಈ ಸದವಕಾಶವನ್ನು ನಾವು ಕಳೆದುಕೊಂಡಿದ್ದೇವೆ. ಅವಮಾನಕರ ಹಾಗೂ ನೋವಿನ ಸಂಗತಿಯೆಂದರೆ, ವ್ಯಾಪಾರ ಸೌಲಭ್ಯಒಪ್ಪಂದದ ನಿಬಂಧನೆಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಕೈಕಟ್ಟಿಹಾಕಿರುವಜೊತೆಗೆಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಆರ್ಥಿಕ ಮತ್ತುತಾಂತ್ರಿಕ ನೆರವನ್ನೂ ಪಡೆಯುವ ವಿಚಾರಕ್ಕೂಅವರ ಮರ್ಜಿಕಾಯಬೇಕಾಗಿದೆ.

ವ್ಯಾಪಾರಕ್ಕೆತ್ರಾಸದಾಯಕವಾದ ವಿನಾಯತಿಗಳನ್ನು ತಗ್ಗಿಸಿ ಮತ್ತುಕ್ರಮೇಣ ಅಳಿಸಿ, ನ್ಯಾಯೋಚಿತವಾದಅಂತಾರಾಷ್ಟ್ರೀಯ ವ್ಯಾಪಾರ ವ್ಯವಸ್ಥೆರೂಪಿಸುವ ಮಹತ್ವಾಕಾಂಕ್ಷಿಉದ್ದೇಶದೊಂದಿಗೆದೋಹಾಅಭಿವೃದ್ಧಿ ಸುತ್ತಿನ ಸಮಾಲೋಚನೆಗಳನ್ನು ಡಬ್ಲ್ಯುಟಿಓ ಆರಂಭಿಸಿತ್ತು.ಎಲ್ಲಾ ಸದಸ್ಯರುತಮ್ಮ ಮಹತ್ವಾಕಾಂಕ್ಷೆಗಳನ್ನು ಹೆಚ್ಚಿಸಿಕೊಳ್ಳಬೇಕೆಂದು ಅದು ಆಗ್ರಹಿಸಿತ್ತು.ಏಕಮತತತ್ವಆಧಾರಿತ ಮೇಲ್ಪಂಕ್ತಿಯ ಮಹತ್ವಾಕಾಂಕ್ಷೆ ಸಾಧಿಸುವಒಪ್ಪಂದವಾಗಬೇಕುಎಂಬುದುಅದರಆಶಯವಾಗಿತ್ತು.ಕೃಷಿ ವಲಯಕ್ಕೆ ನೀಡುವ ವ್ಯಾಪಕ ವಿನಾಯತಿಗಳನ್ನು ಕಡಿತಗೊಳಿಸಬೇಕೆಂಬ ಷರತ್ತಿಗೆಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಬದ್ಧರಾಗದಕಾರಣ ಹಲವು ಸಮಾಲೋಚನೆಗಳು ವಿಫಲವಾದವು.ಆದರೆಇಂದು ಈ ವಿನಾಯತಿಗಳನ್ನು ನೀಡುವಆರ್ಥಿಕ ಬಲ ಕಳೆದುಕೊಂಡ ಪಾಶ್ಚಿಮಾತ್ಯ ರಾಷ್ಟ್ರಗಳು ಏಕ ಮತತತ್ವವನ್ನು ಗಾಳಿಗೆ ತೂರಿವೆ. ತಾವುತಯಾರಿಸುವ ಉತ್ಪನ್ನಗಳು ಹಾಗೂ ಸೇವೆಗಳು ಸರಾಗವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಗಡಿದಾಟಲು ಅನುಕೂಲವಾಗುವಂತಹ ವ್ಯಾಪಾರ ಸೌಲಭ್ಯಒಪ್ಪಂದವನ್ನು ಬಲವಂತವಾಗಿ ನಮ್ಮ ಮೇಲೆ ಹೇರಲಾಗಿದೆ. ತನ್ನ ವಿನಾಯತಿಕಾರ್ಯಕ್ರಮಕ್ಕೆಯಾವುದೇ ಸರಳಿಕೆ ತೋರದಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಉತ್ತಮವಾದ ಮಾರುಕಟ್ಟೆಗೆ ಲಗ್ಗೆಹಾಕುವ ಸುಲಭ ಮಾರ್ಗ ಹುಡುಕಿವೆ. ಎಓಎ ಅಡಿ ತನ್ನಆಹಾರ ಭದ್ರತಾಕಾರ್ಯಕ್ರಮಕ್ಕೆಉದ್ಭವಿಸುವ ಎಲ್ಲಾ ನಿಬಂಧನೆಗಳನ್ನು ಸಂಪೂರ್ಣ ಮುಕ್ತಗೊಳಿಸಬೇಕು ಎಂದು ಭಾರತ ಪಟ್ಟು ಹಿಡಿಯಬೇಕಿತ್ತು. ಈ ಸ್ವರೂಪದ ಶಾಂತಿ ಪರಿಚ್ಛೇದಕ್ಕೆತಾತ್ಕಾಲಿಕಕ್ರಮವಾಗಿಒಪ್ಪಿಗೆ ಸೂಚಿಸಿರುವ ಭಾರತತನ್ನಕಾರ್ಯಕ್ರಮಕ್ಕೆ ಶಾಶ್ವತವಾದ ವಿನಾಯತಿ ಪಡೆಯುವ ಹಕ್ಕನ್ನು ಕಳೆದುಕೊಂಡಿದೆ.

ಸೀಮಿತ ಆಹಾರ ಭದ್ರತೆ 1984ರ ಪ್ರತಿರೂಪವಾಗಿದೆ.ಜೋರ್ಜ್‌ಓರ್ವೆಲ್ ಹೆಮ್ಮೆಪಡುವಂತಿದೆ. ಕೆಲವರುಅನ್ಯರಿಗಿಂತ ಹೆಚ್ಚು ಸಮಾನರು ಎಂಬ ನಾಣ್ಣುಡಿ ಈ ಒಪ್ಪಂದದಿಂದ ಸಾಬೀತಾಗಿದೆಎಂದು ಸೇಂಟ್‌ಗ್ಯಾಲನ್‌ನಲ್ಲಿರುವ ಸ್ವಿಸ್

ವಿಶ್ವವಿದ್ಯಾಲಯದಲ್ಲಿಅಂತಾರಾಷ್ಟ್ರೀಯ ವ್ಯಾಪಾರ ವಿಷಯದ ಪ್ರೊಫೆಸರ್ ಸೈಮನ್ಎವೆನೆಟ್ ವ್ಯಕ್ತಪಡಿಸಿದ ಅನಿಸಿಕೆ ಸೂಕ್ತವಾಗಿದೆ.

(ಡಿಸೆಂಬರ್ 14, 2013ರಂದು ಪ್ರಕಟ)

****